ಪವಿತ್ರ ಪತ್ರಮಾಲೆ

ಸ್ವಾಮಿ ಶಿವಾನಂದಜಿ ಅವರ ಒಂದು ಪತ್ರ

ಶ್ರೀರಾಮಕೃಷ್ಣ ಶರಣಂ
ಚಿಲ್ಕಪೇಟ ಹೌಸ್
ಆಲ್ಮೋರಾ ಪೋಸ್ಟ್ ಆಫೀಸ್
೨೩ ಜನವರಿ ೧೯೧೪

ಪ್ರೀತಿಯ...

ನಿನ್ನ ಪತ್ರ ಬಂದು ತಲುಪಿತು. ಅದರಲ್ಲಿ ನೀನು ಹೇಳಿರುವುದನ್ನೆಲ್ಲ ಗಮನಿಸಿದ್ದೇನೆ. ಜಗತ್ತು ಇರುವುದು ಹೀಗೆಯೇ. ಇದನ್ನು ಗಮನದಲ್ಲಿಟ್ಟುಕೊಂಡು, ಅದರಂತೆ ಬಾಳುವೆಯನ್ನು ನಡೆಸು. ಖಿನ್ನನಾಗುವ ಕಾರಣವೇನೂ ಇಲ್ಲ. ಶ್ರೀಗುರುದೇವರಿಗೆ ಶರಣುಹೊಂದಿ, ನಿನ್ನ ಪಾಲಿನ ಕರ್ತವ್ಯವನ್ನು ಮಾಡುತ್ತ ಹೋಗು. ಪ್ರಪಂಚ ಹೇಗೆ ಇರಬೇಕೋ ಹಾಗೆ ಇದ್ದೇ ಇರುತ್ತದೆ. ಆದರೂ, ಈ ಪ್ರಪಂಚದ ಮೂಲಕವೇ ನೀನು ಆತ್ಮಜ್ಞಾನವನ್ನು ಹೊಂದುವೆ. ಇದು ಬಹಳ ಸ್ವಾರಸ್ಯಕರವಾದ ವಿಚಾರ. ಆ ಜ್ಞಾನವನ್ನು ಪಡೆದಮೇಲೆ ನೀನು ಮುಕ್ತನಾಗುವೆ. ಆಗ ಈ ಜಗತ್ತು ನಿನ್ನನ್ನು ಬಂಧಿಸಲಾರದು. ಇದು ಖಚಿತವೆಂದು ತಿಳಿದುಕೋ. ಬೇರೆಕಡೆ ಕೆಲಸ ಹುಡುಕಿಕೊಂಡು, ನಿನ್ನ ಸಾಲವನ್ನೆಲ್ಲ ನೀನು ತೀರಿಸಿಕೊಳ್ಳಬೇಕೆಂಬುದು ಗುರುದೇವರ ಇಚ್ಛೆಯಾಗಿದ್ದರೆ, ಹಾಗೆಯೇ ಮಾಡು. ಅವರ ಇಚ್ಛೆಯೇ ನಡೆಯಲಿ. ಅದಕ್ಕಾಗಿ ಏಕೆ ಅಷ್ಟು ಚಿಂತಿಸುತ್ತೀಯೆ? ಚಿಂತಿಸಲು ನಿನಗೆ ಯಾವ ಕಾರಣವೂ ಇಲ್ಲ. ಭಗವಂತನು ಅವನ ತೆಕ್ಕೆಯಲ್ಲಿ ನಿನ್ನನ್ನು ತೆಗೆದುಕೊಂಡಿದ್ದಾನೆ. ನೀನು ಮತ್ತೆ ಜನ್ಮವೆತ್ತಲಾರೆ; ಈ ಪ್ರಪಂಚಕ್ಕೆ ಮತ್ತೆ ಬರಲಾರೆ. ಚಿಂತಿಸದಿರು. ಶ್ರೀರಾಮಕೃಷ್ಣರಿಗೆ ಜಯವಾಗಲಿ! ಹೆದರಬೇಡ. ಯಾವತ್ತೂ ಶಾಂತನಾಗಿರು. ಭಗವಂತನ ಕರ್ತವ್ಯವನ್ನು ಮಾಡುತ್ತ ಹೋಗು. ಆದರೆ ಏನನ್ನು ಮಾಡಿದರೂ, ಅದಕ್ಕೆ ಮೊದಲು ಭಗವಂತನನ್ನು ಸ್ಮರಿಸಿಕೋ. **ಜೀವನದಲ್ಲಿ ಅತಿ ಪ್ರಮುಖವಾದ ಸಂಗತಿಯೆಂದರೆ ಭಗವಂತನಲ್ಲಿ ಪ್ರೇಮ ಮತ್ತು ಶ್ರದ್ಧೆ.** ಜಗತ್ತಿನಲ್ಲಿ ನೀನು ಸುಖ ಮತ್ತು ನೋವು – ಎರಡನ್ನೂ ಅನುಭವಿಸಬೇಕಾಗಿ ಬರುತ್ತದೆ. ಆದರೆ ಬರೀ ತಮಾಷೆ. ಅದು ಅಲ್ಪಕಾಲವಷ್ಟೇ ಇರುತ್ತದೆ. ಆದ್ದರಿಂದ ಸುಖ ಮತ್ತು ದುಃಖಗಳೆರಡನ್ನೂ ಕ್ಷಣಿಕವೆಂದು ಭಾವಿಸು; ಅವುಗಳನ್ನು ಮೀರಿಹೋಗು. ಸ್ವಲ್ಪ ಅದೃಷ್ಟ ಖುಲಾಯಿಸಿದಾಗ ನೀನು ಕುಣಿದು ಕುಪ್ಪಳಿಸುವುದಿಲ್ಲ ಎಂದುಕೋ. ಹಾಗೆ ಕುಪ್ಪಳಿಸದಿದ್ದರೆ, ಅದೇ ಅದೃಷ್ಟ ನಿನ್ನನ್ನು ವಂಚಿಸಿದಾಗಲೂ ಅದಕ್ಕಾಗಿ ಖಿನ್ನನಾಗಲಾರೆ. ನಿನ್ನನ್ನು ಮಗುವೆಂದು ನೀನು ಭಾವಿಸಿಕೊಳ್ಳುವೆ. ಆಗ ಹೀಗೆ ಮತ್ತೆ ಮತ್ತೆ ಪ್ರಾರ್ಥಿಸುತ್ತೀಯೆ: "ಭಗವಂತ, ನಾನು ಯಾವತ್ತೂ ನಿನ್ನ ಪಾದಪದ್ಮಗಳಲ್ಲಿ ನೆಲೆಸಿರುವಂತೆ ನೋಡಿಕೋ. ನನಗೆ ದೇಹವಿರುವ ತನಕವೂ, ಸುಖ ಮತ್ತು ದುಃಖಗಳು ಇದ್ದೇ ಇರುತ್ತವೆ. ಅದು ಅನಿವಾರ್ಯವಾದದ್ದು. ನನ್ನ ಒಂದೇ ಪ್ರಾರ್ಥನೆಯೆಂದರೆ, ನಿನ್ನಲ್ಲಿ ನನಗಿರುವ ಪ್ರೀತಿ, ನಿನ್ನಲ್ಲಿ ನನಗಿರುವ ಶ್ರದ್ಧೆ ಮತ್ತು ನಿನ್ನಲ್ಲಿ ನನಗಿರುವ ಭಕ್ತಿ – ಇವೆಲ್ಲವೂ ಹಿಮಾಲಯದಂತೆ ಸ್ಥಿರವಾಗಿರಲಿ ಮತ್ತು ದೃಢವಾಗಿರಲಿ."

ಇನ್ನೇನು ತಾನೇ ನಾನು ಹೇಳಲಿ? ನೀನು ಯಾವ ಸ್ಥಿತಿಯಲ್ಲಿದ್ದರೂ ಭಗವಂತನು ನಿನ್ನನ್ನು ಕಾಪಾಡುತ್ತಿರುವನು.

ಶುಭಾಶಿಷಗಳೊಂದಿಗೆ,

ನಿನ್ನವ
ಶಿವಾನಂದ